ಓ ಎಸ್ ನಂ. 99/2019
ಡಿ ಡಬ್ಲ್ಯೂ: 1
ದಿನಾಂಕ 11-07-2023 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ವಾದಿ ಪರ: ಶ್ರೀಮತಿ ಬಿ ಆರ್ ಆರ್ ವಕೀಲರಿಂದ:

ಪ್ರತಿವಾದ ಪತ್ರಕ್ಕೆ ವಕೀಲರಿಗೆ ಮಾಹಿತಿಯನ್ನು ನನ್ನ ತಾಯಿ ನೀಡಿರುತ್ತಾರೆ. ದಾವಾ ಐಟಂ ನಂ.2 ರ ಆಸ್ತಿಯು ನಮ್ಮ ಕುಟುಂಬಕ್ಕೆ ನನ್ನ ತಾಯಿಯ ಅಕ್ಕನ ಒಪ್ಪಿಗೆ ಮೇರೆಗೆ ನನ್ನ ತಾಯಿಗೆ ನಿಡಿ-3 ರಂತೆ ಖಾತೆ ಬಂದಿರುತ್ತದೆ. ನಿಡಿ-3 ರ ದಾಖಲೆಯಲ್ಲಿ ಪಾರ್ವತಮ್ಮನವರ ಒಪ್ಪಿಗೆ ಮತ್ತು ಸ್ವಾಧೀನಾನುಭವದ ಮೇರೆಗೆ ಎಂದು ನಮೂದಿದೆ ಎಂದರೆ ನಿಜ. ನಿಡಿ-3 ರಲ್ಲಿ ನಮೂದಾಗಿರುವ ವಿಭಾಗದಂತೆ ಎಂದು ತೋರಿಸಲು ವಿಭಾಗವಾಗಿರುವ ಬಗ್ಗೆ ಯಾವ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ನನ್ನ ತಾಯಿ ಮತ್ತು ನನ್ನ ತಾಯಿಯ ಅಕ್ಕನ ನಡುವೆ ಯಾವುದೇ ವಿಭಾಗವಾಗಿಲ್ಲ ಎಂದರೆ ನನಗೆ ಗೊತ್ತಿಲ್ಲ.

ನಿಡಿ-3 ರಂತೆ ಸರ್ವೆ ನಂ.2/3 ರಲ್ಲಿ 1 ಎಕರೆ 2 ಗುಂಟೆ ಮತ್ತು 2/4 ರಲ್ಲಿ 1 ಎಕರೆ 2 ಗುಂಟೆ ನನ್ನ ತಾಯಿಯ ಹಿಸ್ಸೆಗೆ ಬಂದಿದೆ ಎಂದರೆ ನಿಜ. ನಿಡಿ-3 ರ ದಾಖಲೆ ಆಗುವ ಮೊದಲು ಇದ್ದ ಆಸ್ತಿಗಳು ಪಾರ್ವತಮ್ಮ, ನಂಜುಂಡಮ್ಮ, ಹನುಮಂತಪ್ಪ ಮತ್ತು ಚನ್ನಬಸಪ್ಪನವರ ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿಯಲ್ಲ. 1969 ರಲ್ಲಿ ನಾನು ಜನಿಸಿರಲಿಲ್ಲ ಎಂದರೆ ನಿಜ. 1969 ರಲ್ಲಿ ನಿಮ್ಮ ತಾಯಿ ಮದುವೆಯಾಗಿರಲಿಲ್ಲ ಎಂಬ

ಪ್ರಶ್ನೆಗೆ ಸಾಕ್ಷಿಯು ಆಗಿರಬಹುದು ಅಥವಾ ಆಗಿಲ್ಲದೆ ಇರಬಹುದು ನನಗೆ ಸರಿಯಾಗಿ ಗೊತ್ತಿಲ್ಲ. ನನ್ನ ತಾಯಿ ಮದುವೆಯಾಗಿಲ್ಲದ ಕಾರಣ ನನ್ನ ತಾಯಿ ಅವರ ತಂದೆ ಚನ್ನಬಸಪ್ಪಪನವರ ಜತೆ ಇದ್ದರು ಎಂದರೆ ನಿಜ. 1969-70 ರಲ್ಲಿ ನನ್ನ ತಾಯಿ ಯಾವುದೇ ಕೆಲಸಕ್ಕೆ ಹೋಗಿ ದುಡಿಮೆ ಮಾಡುತ್ತಿರಲಿಲ್ಲ ಎಂದರೆ ನಿಜ.

ದಾವಾ ಐಟಂ ನಂ.1, 3 ಮತ್ತು 4 ರ ಆಸ್ತಿಗಳನ್ನು ನನ್ನ ತಾಯಿ ಒಟ್ಟು ಕುಟುಂಬದಲ್ಲಿದ್ದ ಹನುಮಂತಪ್ಪನವರಿಂದ ಕ್ರಯ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.1, 3 ಮತ್ತು 4 ರ ಆಸ್ತಿಗಳು 1969 ರಲ್ಲಿ ನನ್ನ ತಾಯಿಗೆ ಹನುಮಂತಪ್ಪನವರಿಂದ ಕ್ರಯವಾಗಿದೆ ಎಂದರೆ ನಿಜ. ಸದರಿ ಹನುಮಂತಪ್ಪನವರು ನನ್ನ ತಾಯಿಯ ಚಿಕ್ಕಪ್ಪನವರಾಗಿರುವುದರಿಂದ ಯಾವುದೇ ಹಣ ಪಡೆಯದೆ ಕ್ರಯ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪಾರ್ವತಮ್ಮನವರಿಗೆ ಹಿಸ್ಸೆ ಕೊಡಬಾರದೆಂಬ ಉದ್ದೇಶದಿಂದ ನನ್ನ ತಾಯಿ ದಾವಾ ಐಟಂ ನಂ.1, 3 ಮತ್ತು 4 ರ ಆಸ್ತಿಗಳಿಗೆ ಸಂಬಂದಪಟ್ಟಂತೆ ಹನುಮಂತಪ್ಪನವರಿಂದ ಕ್ರಯಪತ್ರ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ದಾವಾ ಐಟಂ ನಂ.5 ಮತ್ತು 6 ರ ಆಸ್ತಿಗಳು ಹನುಮಂತಪ್ಪನವರಿಂದ 1975-76 ರಲ್ಲಿ ನನ್ನ ತಾಯಿಗೆ ಕ್ರಯವಾಗಿದೆ ಎಂದರೆ ನಿಜ. ದಾವಾ ಐಟಂ ನಂ.5 ಮತ್ತು 6 ರ ಆಸ್ತಿಗಳಲ್ಲಿ ಪಾರ್ವತಮ್ಮನವರಿಗೆ ಯಾವುದೇ ಹಿಸ್ಸೆ ನೀಡಬಾರದೆಂಬ ಉದ್ದೇಶದಿಂದ ನನ್ನ ತಾಯಿ ಹನುಮಂತಪ್ಪನವರಿಂದ ಕ್ರಯಪತ್ರ

ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಚನ್ನಬಸಪ್ಪ ಮತ್ತು ಹನುಮಂತಪ್ಪನವರ ಹೆಸರಿನಲ್ಲಿ ನಿವೇಶನ ಮತ್ತು ಮನೆಗಳು ಇದ್ದವು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಾಯಿ ಹೆಸರಿನಲ್ಲಿವೆ ಎಂದು ನುಡಿದಿರುತ್ತಾರೆ. ಮನೆ ಮತ್ತು ನಿವೇಶನ ನನ್ನ ತಾಯಿಗೆ ಯಾವ ರೀತಿ ಬಂದಿದೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ಬಳ್ಳಕೆರೆ ಗ್ರಾಮದ ಮನೆ ಮತ್ತು ನಿವೇಶನಗಳು ಚನ್ನಬಸಪ್ಪ ಮತ್ತು ಹನುಮಂತಪ್ಪನವರಿಗೆ ಸೇರಿದ್ದು, ಪಾರ್ವತಮ್ಮನವರಿಗೆ ಹಿಸ್ಸೆ ಕೊಡಬಾರದೆಂದು ನನ್ನ ತಾಯಿ ಕ್ರಯಪತ್ರಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಮನೆ ಮತ್ತು ನಿವೇಶನಕ್ಕೆ ಸಂಬಂದಪಟ್ಟಂತೆ ನ್ಯಾಯಾಲಯದಲ್ಲಿ ತೀರ್ಪಾಗಿದ್ದು, ಸದರಿ ತೀರ್ಪಿನ ಪ್ರಕಾರ ನನ್ನ ಅಣ್ಣನಾದ ರವಿಕುಮಾರ್ ರವರ ಹಿಸ್ಸೆಗೆ ಬಂದಿರುತ್ತದೆ, ದಾಖಲೆಯನ್ನು ನಾನು ಹಾಜರುಪಡಿಸುತ್ತೇನೆ ಎಂದು ನುಡಿದಿರುತ್ತಾರೆ.

ವಾದಿ ಸಲ್ಲಿಸಿರುವ ದಾವೆಯ ಬಗ್ಗೆ ನಾನು ತಿಳಿದುಕೊಂಡಿರುತ್ತೇನೆ. ದಾವಾ ಐಟಂ ನಂ.1, 3 ರಿಂದ 6 ರ ಆಸ್ತಿಗಳನ್ನು ಹನುಮಂತಪ್ಪನವರಿಂದ ಖರೀದಿಸಿರುವ ಆಸ್ತಿಗಳೇ ಹೊರತು ಬೇರೆಯವರಿಂದ ಖರೀದಿಸಿಲ್ಲ ಎಂದರೆ ನಿಜ. ನನ್ನ ತಾಯಿ ಪಾರ್ವತಮ್ಮ ಮತ್ತು ಅವರ ಮಕ್ಕಳಿಗೆ ಹಿಸ್ಸೆ ನೀಡಬಾರದೆಂಬ ಉದ್ದೇಶಕ್ಕಾಗಿ ನಿಡಿ-2 ರಿಂದ 6 ರ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸರ್ವೆ ನಂ.2 ರಲ್ಲಿ 1 ಎಕರೆ 2 ಗುಂಟೆ ಜಮೀನನ್ನು ಪಾರ್ವತಮ್ಮನವರ ಅವರ ಮಗಳ ಮದುವೆಯ ಸಲುವಾಗಿ

ಮಾರಾಟ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ವಿಚಾರವನ್ನು ಪ್ರತಿವಾದ ಪತ್ರದಲ್ಲಿ ನಮೂದಿಸಿರುವುದಿಲ್ಲ.

ದಾವಾ ಆಸ್ತಿಗಳು ನನ್ನ ತಾಯಿ ಮತ್ತು ಪಾರ್ವತಮ್ಮನವರ ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆ ಹಣ ಕೊಟ್ಟು ನನ್ನ ತಾಯಿ ಹೆಸರಿನಲ್ಲಿ ಖರೀದಿ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ನಿಡಿ-4 ಮತ್ತು 5ರ ದಾಖಲಾತಿಗಳಲ್ಲಿ ನನ್ನ ತಂದೆ ಹಣ ನೀಡಿ ನನ್ನ ತಾಯಿ ಹೆಸರಿಗೆ ಖರೀದಿಸಿರುವ ಬಗ್ಗೆ ನಮೂದು ಇಲ್ಲ ಎಂದರೆ ನಿಜ. ನನ್ನ ತಂದೆ ಆರೋಗ್ಯ ಇಲಾಖೆಯಲ್ಲಿ ಹೆಲ್ತ್ ಇನ್ಸಪೆಕ್ಟರಾಗಿ ಕೆಲಸ ಮಾಡುತ್ತಿದ್ದರು ಎಂದರೆ ನಿಜ. ಸಾಕ್ಷಿ ಮುಂದುವರೆದು  ಜಮೀನು ಸಹ ಇತ್ತು ಎಂದು ನುಡಿದಿರುತ್ತಾರೆ. 1969 ರಲ್ಲಿ ನನ್ನ ತಂದೆಗೆ ಮಾಸಿಕ ಎಷ್ಟು ವೇತನ ಬರುತ್ತಿತ್ತು ಎಂದು ನನಗೆ ಗೊತ್ತಿರುವುದಿಲ್ಲ.  ನನ್ನ ತಂದೆ ತಾಯಿಗೆ ಒಟ್ಟು 5 ಜನ ಮಕ್ಕಳು. ಆದ ಕಾರಣ ನನ್ನ ತಂದೆ ಸಂಪಾದನೆ ನಮ್ಮ ಕುಟುಂಬ ನಿರ್ವಹಣೆಗೆ ಸಾಕಾಗುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಗೆ ಯಾವುದೇ ಜಮೀನು ಇರಲಿಲ್ಲ ಎಂದರೆ ಸರಿಯಲ್ಲ.

ದಾವಾ ಐಟಂ ನಂ.1, 3 ರಿಂದ 6ರ ಆಸ್ತಿಗಳನ್ನು ಖರೀದಿಸಲು ನನ್ನ ತಂದೆ ಯಾವುದೇ ಹಣ ನೀಡಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಚನ್ನಬಸಪ್ಪ ಮತ್ತು ಹನುಮಂತಪ್ಪನವರ ಒಟ್ಟು ಕುಟುಂಬದ ಆಸ್ತಿಗಳಾಗಿದ್ದರೂ ಸಹ ವಾದಿಗೆ ಹಿಸ್ಸೆ ಕೊಡಬೇಕಾಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ., ಕಡೂರು.